ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಸಹಕಾರ ಅವರಿಗೆ ಬೇಕು. ಅವರ ಸಹಕಾರ ನಮಗೆ ಬೇಕಾಗುತ್ತದೆ. ಮಾತು ಕತೆ ನಡೆಸುವುದಕ್ಕೆ ಬರುವುದಿಲ್ಲವೆಂದು ಮೊಂಡುತನ ಮಾಡಬಾರದು.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ.....

ಉಪಾಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಗಡಿ ವಿಚಾರದಲ್ಲಿ ಉತ್ತರ ಹೇಳಿದ್ದಾರೆ. ಅದನ್ನು ಮತ್ತೆ ಕೇಳುವುದು ಬೇಡ.

ಶ್ರೀ ಭೀಮಣ್ಣ ಖಂಡ್ರೆ —ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ತಾವು ಸರ್ಕಾರದ ಗಮನ ಸೆಳೆದಿದ್ದೀರಿ. ಸರ್ಕಾರದವರು ಸೂಕ್ತವಾಗಿ ಉತ್ತರಿಸಿದ್ದಾರೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.—ಮಹಾಜನ್ ವರದಿಯನ್ನು ನಾವು ಒಪ್ಪಿದ್ದೇವೆ.....

ಉಪಾಧ್ಯಕ್ಷರು.—ಎಲ್ಲಾ ಮುಗಿಯಿತು. ತಾವು ಮತ್ತೆ ಮತ್ತೆ, ನನ್ನ ಅಪ್ಪಣೆ ಇಲ್ಲದೆ ಮಾತನಾಡಿದರೆ ಅದು ದಾಖಲೆಯಲ್ಲಿ ಹೋಗುವುದಿಲ್ಲ.

(ii) ದಕ್ಷಿಣ ವಲಯದ ಮುಖ್ಯ ಮಂತ್ರಿಗಳ ಸಭೆ ನಡೆದ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ಚರಿತಾರ್ಹವಾದಂಥ ಸಭೆಯಲ್ಲಿ ಭಾಗವಹಿಸಿದ್ದರು. ಅದು ಪತ್ರಿಕೆಯಲ್ಲಿ ಕೂಡ ಬಂದಿದೆ ದಕ್ಷಿಣ ವಲಯ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದ್ದಂಥ ಸಭೆ ಅದು. ತಮಿಳುನಾಡು ಆಂಧ್ರಪ್ರದೇಶ ಮತ್ತು ಪಾಂಡಿಚೇರಿ ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿ ಮಹತ್ವರವಾದ ಅಂಶಗಳನ್ನು ಚರ್ಚೆ ಮಾಡಿದ್ದಾರೆ. ಕೇಂದ್ರ ರಾಜ್ಯಗಳಿಗೆ ಇರತಕ್ಕಂಥ ಸಂಬಂಧ ಹಾಗೂ ಅದರಲ್ಲಿ ರಾಜ್ಯಗಳಿಗೆ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಡಬೇಕೆನ್ನುವ ವಿಷಯದಲ್ಲಿ ತಮ್ಮ ಹಕ್ಕುಗಳ ಬಗ್ಗೆಯೂ ಮಾತನಾಡಿದ್ದಾರೆ. ಜೊತೆಗೆ ವಿತ್ತೀಯ ಆಯೋಗದವರಿಗೆ ದಕ್ಷಿಣ ವಲಯ ರಾಜ್ಯಗಳಿಗೆ ಸಂಬಂಧಪಟ್ಟಂತೆ ವಿಶೇಷರೂಪವಾದ ಬೇಡಿಕೆಯನ್ನು ಇಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇಂಥ ಸಭೆಗಳು ಆಗಿಂದಾಗ್ಗೆ ನಡೆಯಬೇಕೆಂಬ ಇಚ್ಛೆಯನ್ನು ವ್ಯಕ್ತ ಮಾಡಿದ್ದಾರೆ. ಈ ಸಭೆಯನ್ನು ಕರೆಯುವ ಮುನ್ನ ಈ ಮನೆಯ ವಿಶ್ವಾಸವನ್ನು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು ಎಂದು ನನ್ನ ಅನಿಸಿಕೆ. ಮಾನ್ಯ ಮುಖ್ಯಮಂತ್ರಿಯವರಿಗೆ ಕಾಲಾವಕಾಶ ಇಲ್ಲದೇ ಇತ್ತು ಎಂದು ಕಾಣುತ್ತದೆ. ಆದರೂ ಸಭೆಯಲ್ಲಿ ನಡೆದ ಪೂರ್ಣ ವಿವರಗಳನ್ನು ಈ ಮನೆಗೆ ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಪ್ರಸ್ತಾಪ ಮಾಡಿದ ವಿಷಯವನ್ನು ನಾನು ಕೂಡ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ಕೆಲವೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ನಡೆದಂಥ ಸಭೆಯಲ್ಲೂ ಕೂಡ ಕೆಲವೊಂದ ನಿರ್ಣಯಗಳನ್ನು ಮಾಡಿದ್ದಾರೆ. ರಾಜ್ಯಕ್ಕೆ ಕೇಂದ್ರದಿಂದ ಬರತಕ್ಕಂಥ ಆರ್ಥಿಕ ನೆರವು ಪಡೆಯಬೇಕೆಂಬುದಲ್ಲಿ ಭಿನ್ನಭಿಪ್ರಾಯ ಇಲ್ಲ ರಾಜ್ಯಕ್ಕೆ ಬರಬೇಕಾದ ಅನುಕೂಲಗಳನ್ನು ಪಡೆಯುವ ವಿಚಾರದಲ್ಲಿ ನಾವು ಕೂಡ ಸಹಕರಿಸುವುದಕ್ಕೆ ಸಿದ್ಧರಿದ್ದೇವೆ. ಬಹಳ ಮಟ್ಟಿಗೆ ಇಂಥ ಸಭೆ ಸೇರುವುದಕ್ಕೆ ಮುನ್ನ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯನ್ನು ತಮ್ಮ ಪಂಬಿಕೆಗೆ ತೆಗೆದುಕೊಂಡಿದ್ದರೆ ಚನ್ನಾಗಿತ್ತು ಎಂದು ನನಗನ್ನಿಸುತ್ತದೆ. ರಾಷ್ಟ್ರಾಂಗದಲ್ಲಿ ದಕ್ಷಿಣ ವಲಯಗಳ ಮುಖ್ಯಮಂತ್ರಿಗಳ ಸಭೆ ನಡೆಸುವುದಕ್ಕೆ ಅವಕಾಶ ಇದೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮಂತುವರ್ಷ ತೆಗೆದುಕೊಂಡು ಸಭೆ ನಡೆಸಿದ್ದಾರೆ. ಇದರ ಬಗ್ಗೆ ನಾನು ವಿರೋಧ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ನಡೆಸಿದಂಥ ಸಭೆಯಲ್ಲಿ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದಕ್ಕೆ ಪೂರ್ವಭಾವಿಯಾಗಿ ಚರ್ಚೆ ಮಾಡುವಂಥ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಚೆನ್ನಾಗಿತ್ತೆಂದು ನನ್ನ ಅಭಿಪ್ರಾಯ.

ಶ್ರೀ ಎಂ.ಎಸ್, ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರೆ ನಂತರ ವಿವರ ಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ. ಈಗಾಗಲೇ ಮಾನ್ಯ ಸದಸ್ಯರಾದಂಥ ಕೃಷ್ಣನ್‌ರವರು ಹಾಗೂ ರಂಗನಾಥ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ಪುಷ್ಟೀಕರಿಸುತ್ತಾ ಮಾನ್ಯ ಮುಖ್ಯಮಂತ್ರಿಯವರು ಈ ಸದನ ನಡೆಯುತ್ತಿರುವಾಗ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತೆಂದು ಹೇಳುತ್ತೇನೆ. ಪ್ರಾಮುಖ್ಯವಾದ ಅನೇಕ ವಿಚಾರಗಳನ್ನು, ಸಂವಿಧಾನಕ್ಕೆ ಸಂಬಂಧಪಟ್ಟಂತೆ ಮೂಲಭೂತವಾದ ಪ್ರಶ್ನೆಗಳನ್ನು ಮತ್ತು ಕೇಂದ್ರ ಹಾಗೂ ರಾಜ್ಯಗಳ ಸಂಬಂಧದ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ, ಸಂವಿಧಾನಕ್ಕೆ ಹೊರತಾಗಿ ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ. ಜೋನಲ್ ಕೌನ್ಸಿಲ್ ಮೀಟಿಂಗ್ ಕರೆಯುವುದಕ್ಕೆ ರಾಜ್ಯಾಂಗ ಬದ್ಧವಾಗಿಯೇ ಅಧಿಕಾರ ಇದೆ. ಅಧ್ಯಕ್ಷರೆ, ನೆನ್ನೆಯ ದಿವಸ ಜೋನಲ್ ಕೌನ್ಸಿಲ್ ಸಭೆ ಸೇರಿ ಚರ್ಚೆ ಮಾಡಿರುವುದು ಪ್ಯಾರಲಲ್ ಸಭೆ ಮಾಡಿದಂತಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಅಧಿಕಾರವಿದೆ. ಕೆಲವೊಂದು ವಿಚಾರಗಳಿಗೆ ಬೆಂಬಲ ಕೊಡತಕ್ಕ ಮುಖ್ಯಮಂತ್ರಿಗಳ ಒಂದು ಕಡೆ ಸೇರುವುದಾದರೆ ಕೇರಳ ಮುಖ್ಯ ಮಂತ್ರಿಯವರನ್ನು ಬಿಟ್ಟುಬಿಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೌಹಾರ್ದಯುತವಾಗಿ ಇರಬೇಕಾಗಿರುತ್ತದೆ ಎಂಬ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಸಭೆ ಮಾಡಿದ್ದಾರೆ. ನಮ್ಮ ರಾಜ್ಯದ ಹಿತಾಸಕ್ತಿಯನ್ನು ನಾವು ಭದ್ರವಾಗಿ ಹಿಡಿಯಲಿಕ್ಕೆ ವಿಶ್ವಾಸದಿಂದ ಇದ್ದೇವೆಂದು ಈ ಬಗ್ಗೆ ಪ್ರಣವ್ ಮುಖರ್ಜಿ ಅವರ ಹತ್ತಿರ ಮಾತನಾಡುವಾಗ ವ್ಯಕ್ತಪಡಿಸಿದ್ದಾರೆ. ಕೇಂದ್ರಕ್ಕೆ ವಿರುದ್ಧವಾಗಿರತಕ್ಕ ಪಕ್ಷಗಳು ಜೋನಲ್ ಕೌನ್ಸಿಲ್ ಸಭೆ ಮಾಡತಕ್ಕದ್ದು ಒಂದು. ಪರಂಪರಾನುಗತವಾಗಿ ಜೋನಲ್ ಕೌನ್ಸಿಲ್ ಸಭೆ ಮಾಡತಕ್ಕದ್ದು ಒಂದು. ಪ್ಯಾರಲಲ್ ಆಗಿ ಸಭೆ ಮಾಡುವುದು ಬೇರೆ, ಆದರೆ ರಾಜ್ಯದ ಹಿತಾಸಕ್ತಿಯನ್ನು ಉಳಿಸಿಕೊಳ್ಳುವುದು ಮುಖ್ಯ. ಮೊನ್ನೆ ಗುರುವಾರ, ಶುಕ್ರವಾರ ಇಲ್ಲಿ ಸಭೆ ನಡೆದಿದೆ. ಅಂದು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರೆ, ಚೆನ್ನಾಗಿತ್ತು. ರಾಜ್ಯದ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವಲ್ಲಿ ನಾವೆಲ್ಲರೂ ಒಂದೇ. ಅದರಲ್ಲಿ ನಾವು ಬೇರೆ ನೀವು ಬೇರೆ ಎಂದು ತಿಳಿದುಕೊಳ್ಳಬೇಕಾಗಿಲ್ಲ. ಫೈನಾನ್ಸ್ ಕಮಿಷನ್ ಈಗಲಾಗಲೇ ನೇಮಕ ವಾಗಿರುವಾಗ ಅಲ್ಲಿ ಅನೇಕ ವಿಚಾರಗಳನ್ನು, ಆರ್ಥಿಕ ಮೂಲವಾದ ಪ್ರಶ್ನೆಗಳನ್ನು ಎತ್ತಿರ್ತೇವೆ. ಅದನ್ನು ರಿಪೈಸ್ ಮಾಡಲಿಕ್ಕೆ ಮಾಡಬಹುದಿತ್ತು. ದಕ್ಷಿಣ ಭಾಗದ ಮುಖ್ಯ ಮಂತ್ರಿಗಳು ಸಭೆ ಸೇರುವುದು ತಪ್ಪಲ್ಲ. ಆದಕ್ಕೆ ಒಂದು ತರಹ ರೂಪು ಕೊಟ್ಟು, ಒಂದು ರೀತಿ ಸಂಘರ್ಷದಿಂದ ನಡೆಯುವುದು ಸರಿಯಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡಬೇಕು. ಇಲ್ಲಿ ಆ ವಿಚಾರದ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಇಡೀ ಸಭೆಯನ್ನು ತಾವು ವಿಶ್ವಾಸದಲ್ಲಿ ತೆಗೆದುಕೊಳ್ಳಲಿಲ್ಲ ಇನ್ನು ಮುಂದಾದರೂ ಈ ತರಹ ಸಭೆ ಸೇರಿರುವಾಗ ಸಭೆಯ ಮತಿಯಿಂದ ಸಂಧಾನ ಮಾಡಿಕೊಂಡು ಮುಂದುವರಿಸಬೇಕು. ಇದು ರಾಜ್ಯದ ಹಿತಾಸಕ್ತಿ ರಕ್ಷಣೆ ಮಾಡುವ ದೃಷ್ಟಿಯಲ್ಲಿ ಅಗತ್ಯವಿದೆ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾನು ಈ ವಿಷಯದ ಮೇಲೆ ಪ್ರಸ್ತಾಪ ಮಾಡಲಿಕ್ಕೆ ಹೋಗಲಿಲ್ಲ. ಮೊದಲು ಹೇಳಿಕೆ ಕೊಡಲಿ ಅನಂತರ ಯೋಚನೆ ಮಾಡೋಣ ಎಂದು ಹೇಳಿದೆ. ಈಗ ಪ್ರಸ್ತಾಪ ನಡೆದಿದೆ.....

ಶ್ರೀ ಕೆ. ಹೆಚ್. ರಂಗನಾಥ್.—ಸಭೆಯು ನಡೆಯುವಾಗ, ಆ ಸಭೆಯ ಬಗ್ಗೆ ಪ್ರಸ್ತಾಪವಾಗ ತಕ್ಕದ್ದು ಆವಶ್ಯಕ ಆ ದೃಷ್ಟಿಯಿಂದ ಮಾತನಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ ನಾನು ಆದರು ಹೇಳಿದ್ದಕ್ಕೆ ವಿರೋಧ ವ್ಯಕ್ತಪಡಿ ಸುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಘರ್ಷಣೆ ಬಗ್ಗೆ ಎಂದು ಹೇಳಿದರು. ಅದಕ್ಕೆ ಅವರಿಗೆ ಹೇಳುವೇಕಾಗಿದೆ.

ಉಪಾಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ, ದಯವಾಡಿ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಮೂರು ರಾಜ್ಯದ ಮುಖ್ಯ ಮಂತ್ರಿಗಳು ಅಂದರೆ ಆಂಧ್ರ, ತಮಿಳುನಾಡು, ಮತ್ತು ಪಾಂಡಿಚೆರಿ ಮುಖ್ಯ ಮಂತ್ರಿಗಳು ನನ್ನ ಆಹ್ವಾನದ ಮೇರೆಗೆ ಬಂದಿದ್ದರು. ನೆನ್ನೆಯ ದಿವಸ ನಮ್ಮಲ್ಲಿ ಒಂದು ಸಭೆಯನ್ನು ಮಾಡಿದ್ದೇವೆ. ಈ ಸಭೆಗೆ ನಾಲ್ಕನೇ ರಾಜ್ಯದ ಅಂದರೆ ಕೇರಳ ರಾಜ್ಯದ ಮುಖ್ಯ ಮಂತ್ರಿಯವರನ್ನು ನಾನು ಆಹ್ವಾನಿಸಿದ್ದೆ. ಅವರು ಶಾಸನ ಸಭೆ ಅಧಿವೇಶನ ನಡೆಯುತ್ತಿರುವುದರಿಂದ ಬರಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ನಾನು ಫೋನ್ ಮಾಡಿ ಎಲ್ಲಾ ಕಡೆ ಶಾಸನ ಸಭೆ ಅಧಿವೇಶನ ನಡೆಯುತ್ತಿದೆ, ಅದಕ್ಕೋಸ್ಕರವೇ, ಭಾನುವಾರ ಸಭೆ ಇಟ್ಟಿದ್ದೇವೆಂದು ತಿಳಿಸಿದೆ. ಅದಕ್ಕೆ ಅವರು ಸಾಧ್ಯವಾದರೆ ಬರುತ್ತೇನೆಂದು ಹೇಳಿದರು ಆದರೆ ಅವರು ನೆನ್ನೆಯ ದಿವಸದ ಸಭೆಗೆ ಬರಲಿಲ್ಲ. ಮಾನ್ಯ ಸದಸ್ಯರಿಗೆ ನೆನಪು ಇರಬೇಕು. ಒಂದು ತಿಂಗಳ ಹಿಂದೆ ನಾನು ಹೈದರಾಬಾದ್‌ಗೆ ಹೋಗಿದ್ದೆ. ನಾವು ಆಂಧ್ರದಿಂದ ಸಾಕಷ್ಟು ವಿದ್ಯುಚ್ಛಕ್ತಿ ಪಡೆದು ನಮ್ಮ ವಿದ್ಯುಚ್ಛಕ್ತಿ ಕೊರತೆಯನ್ನು ತುಂಬಿಕೊಳ್ಳಬೇಕೆಂದು ಹೋಗಿದ್ದೆ. ಆಲ್ಲಿ ಈ ವಿದ್ಯುಚ್ಛಕ್ತಿ ವಿಚಾರವನ್ನು ಮಾನ್ಯ ಎನ್.ಟಿ. ರಾಮರಾವ್ ಜೊತೆ ಚರ್ಚೆ ಮಾಡುವಾಗ ನನಗೆ ಒಂದು ಯೋಚನೆ ಬಂತು. ಆ ಯೋಚನೆಯನ್ನು ಅವರ ಮುಂದೆ ಇಟ್ಟೆ. ಸುಮಾರು ೧೫–೨೦ ದಿವಸದಲ್ಲಿಯೇ ಫೈನಾನ್ಸ್ ಕಮಿಷನ್ ಅವರು ಬೇರೆ ಬೇರೆ ರಾಜ್ಯಗಳಿಗೆ ಭೇಟಿ ಕೊಡುವವರಿದ್ದಾರೆ, ಆಷ್ಟರೊಳಗೆ ನಾವು ಫೈನಾನ್ಸ್ ಕಮಿಷನ್‌ಗೆ ಮೆಮೊರ್ಯಾಂಡಮ್ ತಯಾರಿಸಬೇಕಾಗುತ್ತದೆ. ಈ ಮೆಮೊರ್ಯಾಂಡಮ್ ತಯಾರು ಮಾಡಬೇಕಾದರೆ ಅನೇಕ ಸಂಗತಿಗಳಲ್ಲಿ ಅನೇಕ ವಿಚಾರಗಳಲ್ಲಿ, ೪–೫ ರಾಜ್ಯಗಳಿಗೆ ಸಂಬಂಧಪಟ್ಟಂಥ ಸಮಸ್ಯೆಗಳ ಬಗ್ಗೆ ಒಂದೇ ತರಹದ ನಿಲುವನ್ನು ತೆಗೆದುಕೊಂಡರೆ ನಮ್ಮೆಲ್ಲರಿಗೂ ಆದರಿಂದ ಹೆಚ್ಚು ಶಕ್ತಿ ಬರುತ್ತದೆ. ಅವರ ಜೊತೆ ಮುಂಡನೆ ಮಾಡಲಿಕ್ಕೆ ಒಗ್ಗಟ್ಟಿನಿಂದ ಪ್ರಯತ್ನ ಮಾಡಿದರೆ ಅದಕ್ಕೆ ಹೆಚ್ಚು ಶಕ್ತಿ ಬರುತ್ತದೆ ಆದಕ್ಕೆ ಹೆಚ್ಚು ಮನ್ನಣೆ ಸಿಕ್ಕುತ್ತದೆ ಎನ್ನುವ ದೃಷ್ಟಿಯಿಂದ ಮಾನ್ಯ ಎನ್.ಟಿ. ರಾಮರಾವ್ ಹತ್ತಿರ ಹೇಳಿ, ಇದರ ಬಗ್ಗೆ ಒಂದು ಮಿಾಟಿಂಗ್ ಕರೆದೂ ಚರ್ಚೆ ಮಾಡೋಣ ಎಂದು ಹೇಳಿದೆ. ಅದಕ್ಕೆ ಅವರು ಆಗ ಬಹುದು, ಒಳ್ಳೆಯ ವಿಚಾರ ಎಂದು ಹೇಳಿದರು. ಅನಂತರ ಉಳಿದ ಮೂರು ರಾಜ್ಯದ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದೆ. ಅವರು ಇದನ್ನು ಸ್ವಾಗತಿಸಿರೆತಕ್ಕ ಪ್ರತಿಕ್ರಿಯೆ ಬಂದಿದೆ. ಆದರ ಪರಿಣಾಮವಾಗಿ ನೆನ್ನೆ ದಿವಸ ಸಭೆ ನಡೆಯಿತು. ಈಗ ಮಾನ್ಯ ಕೃಷ್ಣನ್ ಅವರು ಹಾಕಿದ ಪ್ರಶ್ನೆಯಲ್ಲಿ ವಾಸ್ತವಿಕ ಅಂಶ ತಿಳಿದುಕೊಳ್ಳುವ ಅಂಶ ಇದೆ. ಆದರೆ ಮಾನ್ಯ ರಂಗನಾಥ್ ಅವರ ಆಕ್ಷೇಪದಲ್ಲಿ ಸಭೆ ನಡೆಯುತ್ತಿದೆ, ಸಭೆಯ ವಿಶ್ವಾಸ ತೆಗೆದುಕೊಳ್ಳಲಿಲ್ಲ ಎನ್ನುವ ಅಂಶ ವ್ಯಕ್ತಪಡಿಸಿದರು.

ಶ್ರೀ ಕೆ.ಹೆಚ್. ರಂಗನಾಥ್.—ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಎಂದು ಹೇಳಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಕರ ಆಕ್ಷೇಪ ಏನು ಎಂದರೆ, ಇದು ಕೇಂದ್ರದ ವಿರುದ್ಧ ಈ ಸಭೆ ನಡೆದಿದೆ ಎನ್ನುತಕ್ಕ ಒಂದು ತಿಳುವಳಿಕೆ ಆಗಬಹುದು. ನಮ್ಮ ರಾಜ್ಯದ ಹಿತರಕ್ಷಣೆ ಕೇಂದ್ರ ಸರ್ಕಾರದಿಂದಲೂ ಆಗಬೇಕು ಅದಕ್ಕೋಸ್ಕರ ಪ್ರಧಾನಿಯವರ ಮನ ನೋಯಿಸ ತಕ್ಕದ್ದಾ ಆಗಬಾರದು ಎನ್ನುವುದು ಅವರ ದೃಷ್ಟಿ ಮೊದಲು ಮಾನ್ಯ ಮೊಯಿಲಿ ಅವರ ಆಕ್ಷೇಪಣೆಗೆ ಬರುತ್ತೇನೆ. ಮಾನ್ಯ ಮೊಯಿಲಿಯವರು ಕೇಂದ್ರದ ವಿರುದ್ಧ ದಕ್ಷಿಣ ರಾಜ್ಯಗಳಲ್ಲಿ ಸರ್ಕಾರ ಇದೆ ಎಂದು ಏನು ಹೇಳಿದರು ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೇಳಿದ್ದು ಅಕ್ಷರಶಃ ತೆಗೆದುಕೊಳ್ಳಬೇಡಿ.

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷರೆ, ಉತ್ತರ ಕನ್ನಡದ ಕನ್ನಡಕ್ಕೂ, ದಕ್ಷಿಣ ಕನ್ನಡದ ಕನ್ನಡಕ್ಕೂ ವ್ಯತ್ಯಾಸವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮೊಯಿಲಿಯವರು ನಾನು ಹೇಳಿದ್ದನ್ನು ಅಕ್ಷರಶಃ ತೆಗೆದು ಕೊಳ್ಳಬೇಡಿ ಎಂದು ಹೇಳುತ್ತಿದ್ದಾರೆ. ಅವರು ಅಕ್ಷರಶಃ ಏನು ಮಾತನಾಡುತ್ತಾರೆ ಅದನ್ನು ನಂಬುತ್ತಾರೆಂದು ತಿಳಿದುಕೊಂಡಿದ್ದೆ. ನೆನ್ನೆ ನಡೆದ ಸಭೆಯಲ್ಲಿ ಏನು ತೀರ್ಮಾನವಾಗಿದೆ ಅದು ಕೇಂದ್ರಸರ್ಕಾರದ ವಿರುದ್ಧ ತೆಗೆದುಕೊಂಡ ಕ್ರಮ ಅಲ್ಲ. ನಮ್ಮ ರಾಜ್ಯದ ಹಿತದ ರಕ್ಷಣೆಗೋಸ್ಕರ ನಾಲ್ಕೈದು ರಾಜ್ಯಗಳು ಒಟ್ಟುಸೇರಿ ಆಗಾಗ ವಿಚಾರವಿನಿಮಯ ಮಾಡಿಕೊಂಡರೆ ತಮ್ಮ ಅನುಭವಗಳನ್ನು ವಿನಿಮಯ ಮಾಡಿ ಕೊಂಡರೆ ಆದರಲ್ಲಿ ತಪ್ಪೇನೂ ಇಲ್ಲ. ನೆನ್ನೆಯ ದಿವಸ ಫೈನಾನ್ಸ್ ಕಮಿಷನ್ ಮುಂದೆ ಯಾವ ಯಾವ ರೀತಿ ಬೇಡಿಕೆ ಇಡಬೇಕೆಂದು ನಿರ್ಣಯ ತೆಗೆದು ಕೊಂಡಿದ್ದೇವೆ. ಮುಖ್ಯ ಮಂತ್ರಿಗಳ ಒಂದು ಕಮಿಟಿ ಆಗಬೇಕು. ಮುಂದೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಕೌನ್ಸಿಲ್ ಆಫ್ ಚೀಫ್ ಮಿನಿಸ್ಟರ್ಸ್ ಮಾಡಬಹುದು ಎಂಬ

ಒಂದು ಅಂಶ ಇದೆ. ಅದು ನಮ್ಮ ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೊ ನನಗೆ ತಿಳಿಯುವುದಿಲ್ಲ, ಅದು ಆರ್ಟಿಕಲ್ ೨೯೩ ಅಥವಾ ೨೯೩ ಇರಬಹುದು; ನನಗೆ ನೆನಪು ಇಲ್ಲ. ಈ ಒಂದು ಸಮಿತಿಯನ್ನು ಮಾನ್ಯ ರಾಷ್ಟ್ರ ಅಧ್ಯಕ್ಷರು ಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮೊಯ್ಲಿಯವರು ಹೇಳಬಹುದು, ಇದು ಎನ್.ಡಿ.ಸಿ.ಗೆ ಇದು ಪ್ಯಾರಲಲ್ ಬಾಡಿ ಆಗುವುದಿಲ್ಲವೆ? ಎಂದು. ಇದು ಅವರ ಆ ಅಭಿಪ್ರಾಯ ಇರಬಹುದು. ಜೋನಲ್ ಕೌನ್ಸಿಲ್ ಬಹಳ ಉಪಯುಕ್ತವಾದುದು. ಈ ಜೋನಲ್ ಕೌನ್ಸಿಲ್ ಯಾವಾಗ ಸೇರುತ್ತದೆ ಎಂದರೆ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಕರೆದಾಗ ಮಾತ್ರ. ಅಲ್ಲಿ ಚರ್ಚೆಯಾಗತಕ್ಕ ವಿಚಾರ ಏನೇನು ಎಂಬುದು ಮಾನ್ಯ ಮೊಯ್ಲಿಯವರಿಗೂ ಗೊತ್ತಿದೆ. ಇತ್ತೀಚೆಗೆ ಪಾಂಡಿಚೆರಿಯಲ್ಲಿ ಈ ಜೋನಲ್ ಕೌನ್ಸಿಲ್ ಮೀಟಿಂಗ್ ಸೇರಿತ್ತು. ಆ ಮೀಟಿಂಗ್‌ನಲ್ಲಿ ಚರ್ಚೆಯಾದ ಎರಡು ವಿಚಾರಗಳು ಯಾವುವು ಎಂಬುದನ್ನು ಮಾನ್ಯ ಮೊಯ್ಲಿಯವರು ಹೇಳಬೇಕು. ಆಲ್ಲಿ ರಾಜ್ಯಗಳ ಹಿತಕ್ಕೆ ಸಂಬಂಧಪಟ್ಟ ವಿಷಯಗಳು ಚರ್ಚೆಯಾಗಿರುವುದಿಲ್ಲ.

ಮಾನ್ಯ ಉಪಾಧ್ಯಕ್ಷರೆ, ಆ ಮೀಟಿಂಗ್‌ನಲ್ಲಿ ರಾಜ್ಯದ ಹಿತಕ್ಕೆ ಸಂಬಂಧಪಟ್ಟಂತೆ ಯಾವ ವಿಷಯವೂ ಚರ್ಚೆಯಾಗಿರುವುದಿಲ್ಲ. ಅಲ್ಲಿ ಅಂತರ್‌ರಾಜ್ಯ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು. ಜೋನಲ್ ಕೌನ್ಸಿಲ್, ಕೇಂದ್ರ ಸರ್ಕಾರದ ಗೃಹಮಂತ್ರಿಗಳು ಕರೆದಾಗ ಮಾತ್ರ ಸೇರುತ್ತದೆ. ಒಂದೊಂದು ಸಾರಿ ಆ ಮೀಟಿಂಗ್‌ನ ಆಜೆಂಡಾವನ್ನು ನೋಡಿದರೆ ನಾಗಾ ಬರುತ್ತದೆ ಮುಂಬೈ ವಿಚಾರಗಳನ್ನೆಲ್ಲಾ ಚರ್ಚೆಮಾಡಲು ಜೋನಲ್ ಕೌನ್ಸಿಲ್ ಇದೆ. ಆದರೆ ಅದರ ಉಪಯುಕ್ತತೆ ಬಹಳ ಸೀಮಿತವಾದುದು. ಅಷ್ಟೇ ಅಲ್ಲ, ನಮ್ಮ ದೇಶದಲ್ಲಿರತಕ್ಕ ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳೂ ಆಗಾಗ ಸೇರಬೇಕೆಂದಿದೆ. ಈ ಎನ್.ಡಿ.ಸಿ. ಮೀಟಿಂಗ್ ಸಾಮಾನ್ಯವಾಗಿ ವರ್ಷಕ್ಕೆ ಒಂದು ಸಾರಿಯೋ ಅಥವಾ ಎರಡು ವರ್ಷಕ್ಕೆ ಒಂದ ಸಾರಿಯೋ ಆಗುತ್ತದೆ. ಇದರ ಉಪಯುಕ್ತತೆ ಏನು ಎಂದರೆ, ಇಲ್ಲಿಯೂ ಕೂಡ ಕೇಂದ್ರ ಸರ್ಕಾರದವರು ಯಾವ ವಿಷಯಗಳನ್ನು ತರುತ್ತಾರೆ ಅದು ಮಾತ್ರ ಚರ್ಚೆಯಾಗುತ್ತದೆ. ಆದರೆ ಎಲ್ಲ ಮುಖ್ಯ ಮಂತ್ರಿಗಳೂ ಅಲ್ಲಿ ಸಾಕಷ್ಟು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಲು ಅವಕಾಶ ಸಿಕ್ಕುವುದಿಲ್ಲ. ಅಂದರೆ ನಾನು ಕೇಂದ್ರ ಸರ್ಕಾರವನ್ನು ದೂಷಣೆ ಹೂಡುತ್ತಿಲ್ಲ. ಇವತ್ತು ನಾವು ಸದರನ್ ಜೀಫ್ ಮಿನಿಸ್ಟರ್ಸ್ ಕೌನ್ಸಿಲ್ ಏನು ಮಾಡಬೇಕೆಂದಿದ್ದೇವೆ ಅದು ಏನೂ ಪ್ಯಾರಲಲ್ ಬಾಡಿ ಆಲ್ಲ. ಆದರೆ ಇದಕ್ಕೆ ಏನೂ ಕಾನೂನು ಅಥವಾ ಸಂವಿಧಾನದ ಬೆಂಬಲ ಇಲ್ಲ. ಅನೇಕ ಸಂದರ್ಭಗಳಲ್ಲಿ ಮುಖ್ಯ ಮಂತ್ರಿಗಳೂ ಅವರವರ ಅನುಭವಗಳನ್ನು ವಿಚಾರ ವಿನಿಮಯ ಮಾಡಿಕೊಂಡರೆ ಅದರಿಂದ ಎಲ್ಲ ರಾಜ್ಯಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಕೂಡ ಹಿತವಾಗುತ್ತದೆಯೇ ಹೊರತು ಅಹಿತವಾಗುವುದಿಲ್ಲ. ನಿನ್ನೆ ಆದಂಥ ಸಭೆಯಲ್ಲಿ ಆಗಬಾರದಂಥ ಯಾವುದೇ ಒಂದು ಘಟನೆ ಆಗಿಲ್ಲ. ಅದನ್ನು ತಾವು ಸ್ವಾಗತ ಮಾಡಬೇಕು. ಬಹುಶ: ಪ್ರಧಾನ ಮಂತ್ರಿಗಳೂ ಕೂಡ ಇದನ್ನು ಸ್ವಾಗತ ಮಾಡಬಹುದು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈ ಸಂಸ್ಥಾನಗಳು ತಮ್ಮ ತಮ್ಮಲ್ಲೇ ಚರ್ಚೆಮಾಡಿ ಭಿನ್ನಾಭಿಪ್ರಾಯಗಳೇನಾದರೂ ಇದ್ದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳಬಹುದು. ಪ್ರತಿಸಾರಿಯೂ ಕೂಡ ನಾವು ಪ್ರಧಾನಮಂತ್ರಿಗಳ ಹತ್ತಿರ ಹೋಗಿ ಅವರ ಅಮೂಲ್ಯವೇಳೆಯನ್ನು ಹಾಳು ಮಾಡುವುದು ಬೇಡ. ಈಗ ಆದು ತಪ್ಪುತ್ತದೆ. ಮೊದಲನೆಯದಾಗಿ ನಾವು ಈಗ ಮಾಡಿರುವ ಸದರನ್ ಜೀಫ್ ಮಿನಿಸ್ಟರ್ಸ್ ಕೌನ್ಸಿಲ್ ಏನಿದೆ ಇದು ಆ ಜೋನಲ್ ಕೌನ್ಸಿಲಿಗೆ ಸರಿಸಮಾನವಾದ ಕೌನ್ಸಿಲ್ ಅಲ್ಲ. ಆದ್ದರಿಂದ ಇದು ಕೇಂದ್ರಸರ್ಕಾರದ ವಿರೋಧ ಎಂದು ಕನಸಿನಲ್ಲೂ ಹೇಳಲು ಸಾಧ್ಯವಿಲ್ಲ.

ಇನ್ನೊಂದು ಮಾತು ಹೇಳುವುದಾದರೆ, ಈಗ ಈ ಮಾನ್ಯ ಸಭೆಯು ನಡೆಯುತ್ತಿರುವುದರಿಂದ ತಾವು ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದರು. ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಅನೇಕ ವಿಚಾರಗಳಿವೆ. ಆದರೆ ಅವು ನಮ್ಮ ರಾಜ್ಯದ ಹಿತಕ್ಕೆ ಸಂಬಂಧಪಟ್ಟಂತೆ ಇರಬೇಕು. ಆಥವಾ ನಾವು ಆ ಸಭೆಯಲ್ಲಿ ಏನಾದರೂ ಕಮಿಟ್‌ಮೆಂಟ್ ಮಾಡಿಕೊಳ್ಳುವಂಥ ರೀತಿಯಲ್ಲಿರಬೇಕು. ನಾನೇನಾದರೂ ನಮ್ಮ ರಾಜ್ಯದ ಹಿತಕ್ಕೆ ಸಂಬಂಧಪಟ್ಟಂತೆ ಏನಾದರೂ ಕಮಿಟ್‌ಮೆಂಟ್ ಮಾಡಿಕೊಳ್ಳುವ ಸಂದರ್ಭ ಬಂದಾಗ ಖಂಡಿತವಾಗಿಯೂ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಹಾಗೆ ತೆಗೆದುಕೊಳ್ಳದೆ ಹೋದರೆ ಅದು ಸ್ವಮಾದವಾಗುತ್ತದೆ. ಈಗ ನಾವು ಒಂದು ನಿಖರವಾದ ನಿಲುವಿನನ್ನು ತೆಗೆದುಕೊಳ್ಳಬೇಕಾದರೆ ಎಲ್ಲ ಪಕ್ಷದ ಮುಖಂಡರನ್ನೂ ಕರೆದು ಚರ್ಚೆಮಾಡಬೇಕಾಗುತ್ತದೆ. ಅದೇರೀತಿ

ನೀರಾವರಿ ವಿಚಾರದಲ್ಲೂ ಕೂಡ ವಿಚಾರ ವಿನಿಮಯ ಮಾಡಬೇಕಾಗುತ್ತದೆ. ಆದರೆ ಇಲ್ಲಿ ಅಂಥಾದ್ದು ಯಾವುದೂ ಇಲ್ಲ. ಉದಾಹರಣೆಗೆ ಹೇಳುವುದಾದರೆ, ನಾನ್ ಅಲೈನ್ಡ್ ಮೀಟಿಂಗ್ ಆಯಿತು. ಅದಕ್ಕೆ ಪಾರ್ಲಿಮೆಂಟನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆಯೇ? ಇಲ್ಲ. ಅವರು ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದರೆ ನಮ್ಮ ದೇಶದಲ್ಲಿ ಅಂಥ ಒಂದು ಪ್ರಸಂಗ ಇರಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಎನ್.ಎ.ಎಂ.ಗೆ ಪಾರ್ಲಿಮೆಂಟ್ ಸದ್ಯರನ್ನು ಆಹ್ವಾನಿಸಿದ್ದಾರೆ. ಇಲ್ಲಿ ತಮಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಉದ್ಭವವಾಗಿದೆ. ಪತ್ರಿಕೆಗಳಲ್ಲೂ ಕೂಡ ಸಾಕಷ್ಟು ವಿಚಾರ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯದ ವಿಚಾರದಲ್ಲಿ ಏನೂ ಚರ್ಚೆ ಮಾಡಿದ್ದಾರೆ ಅದನ್ನು ಸಭೆಗೆ ತಿಳಿಸಬೇಕೆಂದು ನಾವು ಕೇಳಿದ್ದೇವೆ. ಆದರ ಪ್ರತಿಯೊಂದಕ್ಕೂ ಎಸ್.ಎ.ಎಂ.ನ್ನೇ ಹೋಲಿಕೆ ಮಾಡುವುದ ಬೇಡ, ಅದಕ್ಕೂ, ಇದಕ್ಕೂ ಏನು ಸಂಬಂದ? ಉದಾಹರಣೆಯನ್ನು ಕೊಡುವುದಕ್ಕೂ ಒಂದು ಕ್ರಮ ಇರಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇವರು ಕೊಡುವ ಉದಾಹರಣೆ ನಿಮಗೆ ಆಪ್ಯಾಯಮಾನವಾಗಿ ಇರಬೇಕಲ್ಲವೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಜನರಿಗೆ ಆಪ್ಯಾಯಮಾನ ವಿಚಾರ. ಎಲ್ಲ ಪಕ್ಷದ ನಾಯಕರೂ ಇದನ್ನು ಚರಿತ್ರಾರ್ಹ ಘಟನೆ ಎಂದು ಹಾಡಿ ಹೊಗಳಿದ್ದಾರೆ. ನಮಗೆ ಜೋನಲ್ ಕೌನ್ಸಿಲ್‌ನಲ್ಲಿ ಯಾವ ಯಾವ ವಿಚಾರವನ್ನು ಚರ್ಚೆ ಮಾಡಬೇಕೆಂದು ಒಂದು ಅಜೆಂಡಾವನ್ನು ಕಳುಹಿಸಿ ಕೊಡುವ ಹಕ್ಕು ಇದೆ. ಹಿಂದೆ ಪಾಂಡಿಚೆರಿ ಹೆದ್ದಾರಿಯ ಬಗ್ಗೆ ಒಂದು ಏಟಂ ಕೌನಿಲ್ಸ್ ಅಜೆಂಡಾ ದಲ್ಲಿತ್ತು. ಅದೇ ರೀತಿ ಪರಸ್ಪರ ವಿಚಾರಗಳನ್ನೂ ಕೂಡ ಅಜೆಂಡಾ ಮೂಲಕ ಚರ್ಚೆಗೆ ತೆಗೆದುಕೊಳ್ಳ ಬಹುದಾಗಿತ್ತು. ಕೇಂದ್ರ ಸರ್ಕಾರದ ಗೃಹ ಮಂತ್ರಿಗಳೂ ಮತ್ತಿತರ ಮಂತ್ರಿಗಳನ್ನೂ ಆಹ್ವಾನ ಮಾಡುವ ಒಂದು ಹಕ್ಕು ಇರುವಾಗ ಈ ಕೌನ್ಸಿಲ್‌ನ್ನು ಬೇರೆ ಏತಕ್ಕೆ ಏರ್ಪಾಡು ಮಾಡಬೇಕಾಗಿತ್ತು ? ಎಂದು ನಾವು ಕೇಳಿದ್ದವೇ ವಿನಃ ಇನ್ನೇನೂ ಇಲ್ಲ. ಅದಕ್ಕೆ ತಾವು ಸಮರ್ಪಕವಾದ ಉತ್ತರ ಕೊಡಬೇಕೇ ಹೊರತು ಬೇರೆ ಅಲ್ಲ. ಈಗ ಕೇಂದ್ರ ಸರ್ಕಾರಕ್ಕೆ ಸಂಘರ್ಷಣೆಗಳನ್ನು ಒಡ್ಡತಕ್ಕದ್ದು ಸರಿಯಲ್ಲವೆಂದು ತಾವು ಏನು ಹೇಳಿದಿರಿ ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಏಕೆಂದರೆ ರಾಜ್ಯದ ಹಿತಾಸಕ್ತಿ ಬಗ್ಗೆ ತಾವು ಮಾಡುವಾಗ ಸ್ವಾಗತ ಮಾಡುತ್ತೇವೆ. ಇದಕ್ಕೆ ರಾಜಕೀಯ ಬಣ್ಣವನ್ನು ಕಟ್ಟುವುದಕ್ಕೆ ನಾವು ಹೋಗುವುದಿಲ್ಲ. ಇದಕ್ಕೆ ರಾಜಕೀಯ ಬಣ್ಣವನ್ನು ಕಟ್ಟುವುದು ಬೇಡವೆಂದು ತಾವೂ ಕೂಡ ವಿಷಯವನ್ನು ಸ್ಪಷ್ಟೀಕರಿಸಿದ್ದೀರಿ. ಆ ಹೇಳಿಕೆಯನ್ನು ನಾವು ಸ್ವಾಗತ ಮಾಡುತ್ತೇವೆ. ಈ ತರಹದ ರಾಜ್ಯದ ಹಿತಾಸಕ್ತಿ, ಶೀರ್ಮಾನವಾಗಬೇಕಾದಾಗ ಈ ಜೋನಲ್ ಕೌನ್ಸಿಲ್‌ನ್ನು ವೇದಿಕೆಯಾಗಿ ಉಪಯೋಗ ಮಾಡಿಕೊಂಡು ವಿಷಯಗಳ ವಿನಿಮಯ ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಪ್ರಶ್ನೆಯನ್ನು ಎತ್ತಿದ್ದೆ. ಆದರೆ ಅದಕ್ಕೆ ಪೂರ್ತಿಯಾದ ವಿವರಗಳು ಸಿಕ್ಕಲಿಲ್ಲ. ಅದು ಏನಾದರೂ ಗೌಪ್ಯ ವಿಚಾರವಲ್ಲದಿದ್ದರೆ ಅದನ್ನು ನಮಗೆ ತಿಳಿಸಲಿ. ಅದನ್ನು ಹೇಳಿದರೆ ಏನೂ ತಪ್ಪಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ರಾಜ್ಯ ಸರ್ಕಾರದವರು ಏನಾದರೂ ಕಮಿಟ್‌ಮೆಂಟ್ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆಂದು. ಕಮಿಟ್‌ಮೆಂಟ್ ಇರಲಿ, ಇಲ್ಲದಿರಲಿ. ಅಂಥ ಸಂದರ್ಭ ಬಂದಾಗ ನೋಡೋಣ. ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದವರನ್ನು ಕರೆಸಿಕೊಂಡು ಇಂಥಿಂಥ ವಿಚಾರದಲ್ಲಿ ನಾವು ಚರ್ಚೆ ಮಾಡುತ್ತೇವೆಂದು ತಿಳಿಸಿದ್ದಿದ್ದರೆ ನಾವೂ ಕೂಡ ನಮಗೆ ತಿಳಿದದ್ದನ್ನು ಹೇಳುತ್ತಿದ್ದೆವು ಅದರಿಂದ ರಾಜ್ಯದ ಜನತೆಗೂ ಅನುಕೂಲವಾಗುತ್ತಿತ್ತು. ಇದು ಚರಿತ್ರಾರ್ಹ ಘಟನೆ ಎಂದು ಹೇಳಿದರೆ ಇರಬಹುದು. ಶ್ರೀಮತಿ ಇಂದಿರಾಗಾಂಧಿಯವರಿಗೂ ಮತ್ತು ನಮಗೂ ಘರ್ಷಣೆ ಆಗಬಹುದೆಂದು ತಮ್ಮ ಅಭಿಪ್ರಾಯ ಇರಬಹುದೆಂದು ಕಾಣುತ್ತದೆ. ಆದರೆ ಒಂದಾ ವೇಳೆ ಅಂಥ ಪರಿಸ್ಥಿತಿ ಒದಗಿ ಇಂದಿರಾಗಾಂಧಿಯವರಿಗೂ, ನಮಗೂ ಘರ್ಷಣೆ ಆದರೂ ನಾವು ಅದಕ್ಕೆ ಹಿಂಜರಿಯಬೇಕಾಗಿಲ್ಲವೆಂದು ಹೇಳಿ, ನಾನು ಕೇಳಿರುವ ಎರಡು ವಿಷಯಗಳಿಗೂ ತಮ್ಮ ಅಭಿಪ್ರಾಯ ಏನೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

೧ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಸಂಕ್ಷಿಪ್ತವಾಗಿ ತೆಗೆದುಕೊಂಡ ನಿರ್ಣಯದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮುಖ್ಯವಾಗಿ ಹೇಳತಕ್ಕಂಥದ್ದು ಏನೆಂದರೆ ಮತ್ತೀಯ ಆಯೋಗದ ಮುಂದೆ ನಮ್ಮ ನಿಲುಮೆ ಏನು ಇರಬೇಕು, ಮತ್ತು ಎಷ್ಟರಮಟ್ಟಿಗೆ ನಾವು ಕೆಲವು ವಿಚಾರಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದ್ದೇವೆ. ಅಲ್ಲ ಅದಂಥ ವಿಚಾರಗಳನ್ನು ಇಲ್ಲಿ ವಿವರವಾಗಿ ಕೊಡತಕ್ಕಂಥದ್ದು ಬಹುಶಃ ಈ ಸಂದರ್ಭದಲ್ಲಿ ಸಾಧ್ಯವಾಗಲಿಕ್ಕೆ ಇಲ್ಲ. ಎಕ್ಸ್ಪೋರ್ಟ್ ಡ್ಯೂಟಿ ಅನುಪಾತ ಎಷ್ಟು ಇರಬೇಕು, ಕೇಂದ್ರ ಸರ್ಕಾರಕ್ಕೆ ಎಷ್ಟು, ರಾಜ್ಯ ಸರ್ಕಾರಕ್ಕೆ ಎಷ್ಟಿರಬೇಕು ಎಂಬ ಬಗ್ಗೆ ಚರ್ಚೆಯಾಗಿ ಈಗಿರತಕ್ಕಂತೆ ೬೦–೪೦ ಇರುವಂತೆ ಸೂಚನೆ ಮಾಡಬೇಕೆಂಬುದು ಅಲ್ಲಿ ಅಭಿಪ್ರಾಯ ಪಡಲಾಯಿತು. ಅದೇ ರೀತಿ ಬೇರೆ ಬೇರೆ ಬಾಬುಗಳಲ್ಲಿ ರಾಜ್ಯ ಸರ್ಕಾರಕ್ಕೆ ಯೋಗ್ಯವಾಗಿ ಸಿಗಬೇಕಾದಂಥ ಅಂಶ ಎಷ್ಟು ಎಂಬ ಬಗ್ಗೆ ತೀರ್ಮಾನವಾಯಿತು. ವ್ಯವಸಾಯ ಉತ್ಪಾದನೆ ಬಗ್ಗೆಯಾಗಲೀ ಆಹಾರ ಧಾನ್ಯಗಳ ಕೋಟ ಕೊಡತಕ್ಕಂಥದ್ದರ ಬಗ್ಗೆಯಾಗಲಿ ಅಥವಾ ಬೆಲೆಯ ಬಗ್ಗೆಯಾಗಲೆ ಯಾವರೀತಿ ಒಂದು ನಿಲುಮೆಯನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. ಅಷ್ಟೇ ಹೊರತು ಬೇರೆ ಏನನ್ನೂ ತೆಗೆದುಕೊಳ್ಳಲಿಲ್ಲ.

(iii) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಅಭಾವದ ಬಗ್ಗೆ

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ದಯವಿಟ್ಟು ಉತ್ತರ ಹೇಳಬೇಕು. ನಮ್ಮ ರಾಜ್ಯವು ಆಹಾರ ಕೊರತೆಯ ರಾಜ್ಯವಾಗಿರುತ್ತದೆ ಆದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಗೆ ಹೊರಗಿನಿಂದಲೇ ಅಕ್ಕಿ ಬರಬೇಕು. ಅಲ್ಲಿ ಒಳ್ಳೆಯ ರೀತಿಯಲ್ಲಿ ಅಕ್ಕಿಯ ಸಾ ದೊರೆಯುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಒಂದು ಒಂದೂವರೆ ಸಾವಿರ ಫೇರ್ ಪ್ರೈಸ್ ಡಿಪೋಗಳು ಇರುತ್ತವೆ. ಅನಂತರ ಟಿಬಿಪಿಎಂಎಸ್ ಮುಖಾಂತರ ನಡೆಯತಕ್ಕಂಥ ಎಂಟು ಮಿಲ್‌ಗಳು ಕೂಡ ಬಂದ್ ಆಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಶೇಕಡ ೫೦ರಷ್ಟು ಲೆವಿಯ ಮೂಲಕವೇ ಅಕ್ಕಿಯನ್ನು ಪಡೆಯಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿರುವುದರಿಂದ ಲೆವಿ ಕೊಟ್ಟು ಭೀತಿಯನ್ನು ಪಡೆಯುವುದರಲ್ಲಿ ಸಿಕ್ಕಾಪಟ್ಟೆ ಭ್ರಷ್ಟಾಚಾರ ನಡೆಯುತ್ತಿದೆಯೋ ಏನೋ ಎಂದು ಸಂಶಯಕ್ಕೆ ಎಡೆಮಾಡಿ ಕೊಟ್ಟಿದೆ ಹದಿನೇಳು ದಿವಸಗಳಿಂದ ಬೇರೆ ಬೇರೆ ರಾಜ್ಯಗಳಿಂದಲೂ ಬರತಕ್ಕಂಥ ಅಕ್ಕಿಯನ್ನು ಇಲ್ಲಿಸಿರುವುದರಿಂದ ಬಹಳ ತೊಂದರೆಯಾಗಿರುತ್ತದೆ. ಸರ್ಕಾರದವರು ನಿಜವಾಗಿಯೂ ಕೂಡ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಹಂಚತಕ್ಕಂಥ ಅಕ್ಕಿಯನ್ನು ಒದಗಿಸಿದರೆ ಬಹಳ ಒಳ್ಳೆಯದು. ಅಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇರುತ್ತದೆ. ಶಿವಮೊಗ್ಗದಲ್ಲಿ ೨ ರೂಪಾಯಿ ೨-೫೦ ರೂಪಾಯಿಗಳಿಗೆ ಸಿಕ್ಕುತ್ತಿರುವ ಅಕ್ಕಿ ಇಲ್ಲಿ ೩-೫೦, ೩-೬೦ ರೂಪಾಯಿವರೆಗೂ ಬೆಲೆ ಇದೆ. ಇದು ಗ್ರಾಹಕರ ಮೇಲೆ ಬೀಳುತ್ತಿದೆ. ಅಲ್ಲದೆ ಆಂತರ್ ಜಿಲ್ಲಾ ಅಕ್ಕಿ ಸಾಗಾಣಿಕೆಯಲ್ಲೂ ನಿರ್ಬಂಧವಿರುವುದರಿಂದ ಇದನ್ನು ವಿಚಾರ ಮಾಡಬೇಕಾದ್ದು ಇರುತ್ತದೆ. ಪ್ರೊಕ್ಯೂರ್ ಮಾಡಿರತಕ್ಕಂಥ ಅಕ್ಕಿಗೂ ಕೂಡ ೨ ಸಾರಿ ಮೂರು ಸಾರಿ ಲೆವಿಯನ್ನು ವಸೂಲು ಮಾಡತಕ್ಕಂಥದ್ದು ನಡೆಯುತ್ತಿರುತ್ತದೆ. ಇಂಥ ಒಂದು ಗಂಭೀರ ಪರಿಸ್ಥಿತಿ ಇರುವುದರಿಂದ ಈ ವಿಷಯದ ಬಗ್ಗೆ ಚರ್ಚೆಯಾಗಲೇಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇಂಥ ಒಂದು ಪರಿಸ್ಥಿತಿಯಲ್ಲೂ ರಾಯಚೂರಿನಿಂದ ೧೦೦ ಕ್ವಿಂಟಾಲ್ ಅಕ್ಕಿಗೆ ಲೆವಿ ಕೊಟ್ಟು ತಂದಾಗ ಮತ್ತೆ ಲೆವಿಯನ್ನು ತೆಗೆದುಕೊಂಡಿರುತ್ತಾರೆ. ೨ಳ ಲಕ್ಷ ಜನಸಂಖ್ಯೆ ಉಳ್ಳ ನಮ್ಮ ಜಿಲ್ಲೆ ೧೫ ಜನ ಸದಸ್ಯರನ್ನು ಹೊಂದಿದ್ದರೂ ಕೂಡ ಆಹಾರದ ಕೊರತೆಯನ್ನು ಅನುಭವಿಸುತ್ತಿದೆ. ಸರ್ಕಾರದವರೇ ಜವಾಬ್ದಾರಿಯುತವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಕ್ರಮಬದ್ಧವಾಗಿ ಅಕ್ಕಿ ಪೂರೈಕೆ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಮೈಕೆಲ್ ಬಿ. ಫರ್ನಾಂಡಿಸ್.—ಮಾನ್ಯ ಅಧ್ಯಕ್ಷರೇ ಇದೇ ರೀತಿಯಲ್ಲಿ ಬೆಂಗಳೂರು ನಗರದಲ್ಲೂ ಕೂಡ ಕಳೆದ ಎರಡು ತಿಂಗಳಿಂದಲೂ ಸುಮಾರು ಶೇಕಡಾ ೫೦–೬೦ ಭಾಗವಷ್ಟು ಮಾತ್ರ ಅಕ್ಕಿ ಪೂರೈಕೆಯಾಗಿದ್ದು ಶೇಕಡಾ ೪೦ ಭಾಗದಷ್ಟು ಕೊರತೆ ಬಿದ್ದು ಒಂದು ರೀತಿ ಗೊಂದಲ ಪರಿಸ್ಥಿತಿ ಉಂಟಾಗಿರುತ್ತದೆ. ಇದು ಸಾಮಾನ್ಯವಾಗಿ ಅಕ್ಕಿಯ ವಿತರಣೆಯಲ್ಲಿ ಉಂಟಾಗಿರತಕ್ಕಂಥ ಗೊಂದಲ